**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭದ್ರಾವತಿ**

**ಸಿಸಿ ಸಂಖ್ಯೆ: 298/2023**

ಚಾ.ಸಾ-01, ಫ್ರಾ.ಸಾ-01

| | | |
|---|---|---|
| ಹೆಸರು | : | ಸಯ್ಯದ್ ಯಾಕೂಬ್ ಮಿಯಾ |
| ತಂದೆಯ ಹೆಸರು | : | ಲೇಟ್ ಸಯ್ಯದ್ ಮೆಹಬೂಬ್ ಮಿಯಾ |
| ವಯಸ್ಸು | : | 54 |
| ವೃತ್ತಿ | : | ವ್ಯವಸಾಯ |
| ವಾಸ | : | ತಡಸ ಗ್ರಾಮ, ಭದ್ರಾವತಿ |

**ದಿನಾಂಕ 10.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಚಾಸಾ-2 ರಿಂದ 4 ರವರು ನನ್ನ ಸಹೋದರರು. ಚಾಸಾ- 5 ಮತ್ತು 6 ನನ್ನ ಸಂಬಂಧಿಕರು. ಅವರು ಮರಣ ಹೊಂದಿರುತ್ತಾರೆ. ಚಾಸಾ-7 ರಿಂದ 11 ರವರು ಸಂಬಂಧಿಕರು. ಆರೋಪಿತರು ನನ್ನ ಸಂಬಂಧಿಕರು.

ಆರೋಪಿತರು ನನ್ನ ಮತ್ತು ಚಾಸಾ-2, 3 ರವರೊಂದಿಗೆ ಗಲಾಟೆ ಮಾಡಿಲ್ಲ. ನಮಗೆ ಹಲ್ಲೆ ಮಾಡಿಲ್ಲ. ನಮಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ. ನಮಗೆ ಕೊಲೆ ಬೆದರಿಕೆ ಹಾಕಿಲ್ಲ. ನಾನು ಪೊಲೀಸರಿಗೆ ದೂರು ಮತ್ತು ಮುಂದುವರೆದ ಹೇಳಿಕೆ ನೀಡಿಲ್ಲ. ನನ್ನ ಸಮಕ್ಷಮ ಪಂಚನಾಮ, ಕಚ್ಚಾ ನಕಾಶೆ ಜರುಗಿಸಿಲ್ಲ ಮತ್ತು ಏನನ್ನು ಜಪ್ತು ಪಡಿಸಿಲ್ಲ.

ನನಗೆ ಈಗ ತೋರಿಸಿದ ದಾಖಲೆಗಳಲ್ಲಿ ನನ್ನ ಸಹಿಗಳು ಇದೆ. ಆ ದಾಖಲೆಗಳು ದೂರು, ಪಂಚನಾಮ ಮತ್ತು ಕಚ್ಚಾ ನಕಾಶೆಗಳಾಗಿದ್ದು, ಅವುಗಳನ್ನು ಕ್ರಮವಾಗಿ ನಿಪಿ.1 ರಿಂದ 3 ಎಂದು ಮತ್ತು ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.1(ಎ) ರಿಂದ 3(ಎ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕ 01.11.2022 ರಂದು ಬೆಳಗ್ಗೆ 09.30 ಗಂಟೆ ಸಮಯದಲ್ಲಿ ನಮ್ಮ ಗ್ರಾಮದ ಸರ್ವೆ ನಂಬರ್ 44 ರ ಜಮೀನಿನ ಬಳಿ ಹರಿದು ಹೋಗಿರುವ ಭದ್ರಾ ನದಿಯ ಪಶ್ಚಿಮ ದಂಡೆಯ ಖಾಲಿ ಜಾಗದಲ್ಲಿ, ಆರೋಪಿತರು ನನ್ನ, ಚಾಸಾ-2 ಮತ್ತು 3 ರವರ ಜೊತೆ ಗಲಾಟೆ ಮಾಡಿ, ನಮಗೆ ಅವಾಚ್ಯ ಶಬ್ದಗಳಿಂದ ಬೈದು, ಕೊಲೆ ಬೆದರಿಕೆ ಹಾಕಿ, ತಮ್ಮಕೈಗಳಿಂದ ನಮ್ಮ ಮೈಕೈಗೆ ಹೊಡೆದು, ಕಾಲುಗಳಿಂದ ಒದ್ದು, 3 ನೇ ಆರೋಪಿತ ಗುದ್ದಲಿಯಿಂದ ನನ್ನ ತಲೆಯ ಹಿಂಭಾಗಕ್ಕೆ, ಚಾಸಾ-2 ರವರ ತಲೆ ಮತ್ತು ಎಡಗೈಗೆ, ಚಾಸಾ-3 ರವರ ತಲೆಗೆ ಹೊಡೆದು, 4 ನೇ ಆರೋಪಿತ ಗುದ್ದಲಿಯಿಂದ ನನ್ನ ಎಡಗೈ ಮತ್ತು ಬಲಭುಜಕ್ಕೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಹಾಗಾಗಿ ನಿಪಿ-1 ರಂತೆ ದೂರನ್ನು ನಾನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕ **02.11.2022** ರಂದು ಬೆಳಗ್ಗೆ **10.00** ರಿಂದ **11.00** ಗಂಟೆ ಸಮಯದಲ್ಲಿ ಘಟನಾ ಸ್ಥಳದಲ್ಲಿ ಪೊಲೀಸರು ನಾನು ತೋರಿಸಿದ ಹಾಗೆ ಪಂಚನಾಮವನ್ನು ಮತ್ತು ಕಚ್ಚಾ ನಕಾಶೆಯನ್ನು ನಿಪಿ.**2** ಮತ್ತು **3** ರಂತೆ ಚಾಸಾ-**7**

ಮತ್ತು 8 ರವರ ಸಮಕ್ಷಮ ಜರುಗಿಸಿ ಈ ಮೇಲೆ ಹೇಳಿದ ಗುದ್ದಲಿಯನ್ನು ಜಪ್ತು ಪಡಿಸಿರುತ್ತಾರೆ ಎಂದರೆ ಸರಿಯಲ್ಲ.

ಅದೇ ದಿನ ನಾನು ಘಟನೆಯ ಕುರಿತು ಪೊಲೀಸರಿಗೆ ಮುಂದುವರೆದ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅದನ್ನು ತಿರಸ್ಕರಿಸಿದ್ದರಿಂದ ಅದನ್ನು ನಿಪಿ.4 ಎಂದು ಗುರುತಿಸಲಾಯಿತು.

ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ ಇರುವುದಿಲ್ಲ.**

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಹನುಮಂತ ಜಿ.ಹೆಚ್)**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ., ಭದ್ರಾವತಿ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭದ್ರಾವತಿ**

**ಸಿಸಿ ಸಂಖ್ಯೆ: 298/2023**

ಚಾ.ಸಾ-02, ಪ್ರಾ.ಸಾ-02

| | | |
|---|---|---|
| ಹೆಸರು | : | ಸಯ್ಯದ್ ಮಂಜಿಲೆ ಮಿಯಾ |
| ತಂದೆಯ ಹೆಸರು | : | ಲೇಟ್ ಸಯ್ಯದ್ ಮೆಹಬೂಬ್ ಮಿಯಾ |
| ವಯಸ್ಸು | : | 54 |
| ವೃತ್ತಿ | : | ವ್ಯವಸಾಯ |
| ವಾಸ | : | ತಡಸ ಗ್ರಾಮ, ಭದ್ರಾವತಿ |

**ದಿನಾಂಕ 10.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಪ್ರಾಸಾ-1, ಚಾಸಾ-3 ಮತ್ತು 4 ರವರು ನನ್ನ ಸಹೋದರರು. ಚಾಸಾ- 5 ಮತ್ತು 6 ನನ್ನ ಸಂಬಂಧಿಕರು. ಅವರು ಮರಣ ಹೊಂದಿರುತ್ತಾರೆ. ಚಾಸಾ-7 ರಿಂದ 11 ರವರು ಸಂಬಂಧಿಕರು. ಆರೋಪಿತರು ನನ್ನ ಸಂಬಂಧಿಕರು.

ಆರೋಪಿತರು ನನ್ನ, ಪ್ರಾಸಾ-1 ಮತ್ತು ಚಾಸಾ-3 ರವರೊಂದಿಗೆ ಗಲಾಟೆ ಮಾಡಿಲ್ಲ. ನಮಗೆ ಹಲ್ಲೆ ಮಾಡಿಲ್ಲ. ನಮಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ. ನಮಗೆ ಕೊಲೆ ಬೆದರಿಕೆ ಹಾಕಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

ಸಿಸಿ ಸಂಖ್ಯೆ: 298/2023

**<u>ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ</u>**

ದಿನಾಂಕ 01.11.2022 ರಂದು ಬೆಳಗ್ಗೆ 09.30 ಗಂಟೆ ಸಮಯದಲ್ಲಿ ನಮ್ಮ ಗ್ರಾಮದ ಸರ್ವೆ ನಂಬರ್ 44 ರ ಜಮೀನಿನ ಬಳಿ ಹರಿದು ಹೋಗಿರುವ ಭದ್ರಾ ನದಿಯ ಪಶ್ಚಿಮ ದಂಡೆಯ ಖಾಲಿ ಜಾಗದಲ್ಲಿ, ಆರೋಪಿತರು ನನ್ನ, ಪ್ರಾಸಾ–1 ಮತ್ತು ಚಾಸಾ–3 ರವರ ಜೊತೆ ಗಲಾಟೆ ಮಾಡಿ, ನಮಗೆ ಅವಾಚ್ಯ ಶಬ್ದಗಳಿಂದ ಬೈದು, ಕೊಲೆ ಬೆದರಿಕೆ ಹಾಕಿ, ತಮ್ಮ ಕೈಗಳಿಂದ ನಮ್ಮ ಮೈಕೈಗೆ ಹೊಡೆದು, ಕಾಲುಗಳಿಂದ ಒದ್ದು, 3 ನೇ ಆರೋಪಿತ ಗುದ್ದಲಿಯಿಂದ ಪ್ರಾಸಾ–1 ರವರ ತಲೆಯ ಹಿಂಭಾಗಕ್ಕೆ, ನನ್ನ ತಲೆ ಮತ್ತು ಎಡಗೈಗೆ, ಚಾಸಾ–3 ರವರ ತಲೆಗೆ ಹೊಡೆದು, 4 ನೇ ಆರೋಪಿತ ಗುದ್ದಲಿಯಿಂದ ಪ್ರಾಸಾ–1 ರವರ ಎಡಗೈ ಮತ್ತು ಬಲಭುಜಕ್ಕೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ **24.11.2022** ರಂದು ನಾನು ಘಟನೆಯ ಕುರಿತು ಪೊಲೀಸರಿಗೆ ಮುಂದುವರೆದ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅದನ್ನು ತಿರಸ್ಕರಿಸಿದ್ದರಿಂದ ಅದನ್ನು ನಿಪಿ.**5** ಎಂದು ಗುರುತಿಸಲಾಯಿತು.

ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ ಇರುವುದಿಲ್ಲ.**

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಹನುಮಂತ ಜಿ.ಹೆಚ್)**
**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ಭದ್ರಾವತಿ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭದ್ರಾವತಿ**

**ಸಿಸಿ ಸಂಖ್ಯೆ: 298/2023**

ಚಾ.ಸಾ–03, ಪ್ರಾ.ಸಾ–03

| | | |
|---|---|---|
| ಹೆಸರು | : | ಸಯ್ಯದ್ ಮುಬಾರಕ್ |
| ತಂದೆಯ ಹೆಸರು | : | ಲೇಟ್ ಸಯ್ಯದ್ ಮೆಹಬೂಬ್ ಮಿಯಾ |
| ವಯಸ್ಸು | : | 42 |
| ವೃತ್ತಿ | : | ವ್ಯವಸಾಯ |
| ವಾಸ | : | ತಡಸ ಗ್ರಾಮ, ಭದ್ರಾವತಿ |

**ದಿನಾಂಕ 10.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಪ್ರಾಸಾ–1, 2 ಮತ್ತು ಚಾಸಾ–4 ರವರು ನನ್ನ ಸಹೋದರರು. ಚಾಸಾ– 5 ಮತ್ತು 6 ನನ್ನ ಸಂಬಂಧಿಕರು. ಅವರು ಮರಣ ಹೊಂದಿರುತ್ತಾರೆ. ಚಾಸಾ–7 ರಿಂದ 11 ರವರು ಸಂಬಂಧಿಕರು. ಆರೋಪಿತರು ನನ್ನ ಸಂಬಂಧಿಕರು.

ಆರೋಪಿತರು ನನ್ನ, ಪ್ರಾಸಾ–1 ಮತ್ತು 2 ರವರೊಂದಿಗೆ ಗಲಾಟೆ ಮಾಡಿಲ್ಲ. ನಮಗೆ ಹಲ್ಲೆ ಮಾಡಿಲ್ಲ. ನಮಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ. ನಮಗೆ ಕೊಲೆ ಬೆದರಿಕೆ ಹಾಕಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

ಸಿಸಿ ಸಂಖ್ಯೆ: 298/2023

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕ 01.11.2022 ರಂದು ಬೆಳಗ್ಗೆ 09.30 ಗಂಟೆ ಸಮಯದಲ್ಲಿ ನಮ್ಮ ಗ್ರಾಮದ ಸರ್ವೆ ನಂಬರ್ 44 ರ ಜಮೀನಿನ ಬಳಿ ಹರಿದು ಹೋಗಿರುವ ಭಧ್ರಾ ನದಿಯ ಪಶ್ಚಿಮ ದಂಡೆಯ ಖಾಲಿ ಜಾಗದಲ್ಲಿ, ಆರೋಪಿತರು ನನ್ನ, ಫ್ರಾಸಾ–1 ಮತ್ತು 2 ರವರ ಜೊತೆ ಗಲಾಟೆ ಮಾಡಿ, ನಮಗೆ ಅವಾಚ್ಯ ಶಬ್ದಗಳಿಂದ ಬೈದು, ಕೊಲೆ ಬೆದರಿಕೆ ಹಾಕಿ, ತಮ್ಮ ಕೈಗಳಿಂದ ನಮ್ಮ ಮೈಕೈಗೆ ಹೊಡೆದು, ಕಾಲುಗಳಿಂದ ಒದ್ದು, 3 ನೇ ಆರೋಪಿತ ಗುದ್ದಲಿಯಿಂದ ಫ್ರಾಸಾ–1 ರವರ ತಲೆಯ ಹಿಂಭಾಗಕ್ಕೆ ಫ್ರಾಸಾ–2 ರವರ ತಲೆ ಮತ್ತು ಎಡಗೈಗೆ, ನನ್ನ ತಲೆಗೆ ಹೊಡೆದು, 4 ನೇ ಆರೋಪಿತ ಗುದ್ದಲಿಯಿಂದ ಫ್ರಾಸಾ–1 ರವರ ಎಡಗೈ ಮತ್ತು ಬಲಭುಜಕ್ಕೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ **24.11.2022** ರಂದು ನಾನು ಘಟನೆಯ ಕುರಿತು ಪೊಲೀಸರಿಗೆ ಮುಂದುವರೆದ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅದನ್ನು ತಿರಸ್ಕರಿಸಿದ್ದರಿಂದ ಅದನ್ನು ನಿಪಿ.**6** ಎಂದು ಗುರುತಿಸಲಾಯಿತು.

ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಿಸಿ ಸಂಖ್ಯೆ: 298/2023

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ ಇರುವುದಿಲ್ಲ.**

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಹನುಮಂತ ಜಿ.ಹೆಚ್)**
**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ಭದ್ರಾವತಿ**